

ಸ್ಮೋಕಿ ಮೌಂಟೇನ್ ತುಂಬ ಬಣ್ಣಗಳ ತೂರಿದ ಹಾಗೆ...



ಕ್ಯಾಬಿನ್

ಅಮೆರಿಕಾದ ಟೆನಿಸ್ಸಿ ಹಾಗೂ ನಾರ್ತ್ ಕ್ಯಾರೊಲಿನಾ ಗಡಿ ಭಾಗದಲ್ಲಿ ವ್ಯಾಪಿಸಿರುವ 'ದಿ ಗ್ರೇಟ್ ಸ್ಮೋಕಿ ಮೌಂಟೆನ್' ಅತಿ ಹೆಚ್ಚಿನ ಪ್ರವಾಸಿಗರು ಭೇಟಿ ಕೊಡುವ ರಾಷ್ಟ್ರೀಯ ಉದ್ಯಾನ. ರುದ್ರ ರಮಣೀಯವಲ್ಲವಾದರೂ ಶಾಂತ, ಗಂಭೀರ ಹಾಗೂ ಆಹ್ಲಾದಕರ!

ದಟ್ಟ ಕಾಡು, ಸ್ವಚ್ಛ ಝರಿಗಳು, ಮೋಹಕ ಜಲಪಾತಗಳು ಮತ್ತು ವಿಶಿಷ್ಟ ವನ್ಯಜೀವಿಗಳ ಈ ತಾಣವನ್ನು ವರ್ಷಪೂರ್ತಿ ಸಂದರ್ಶಿಸಬಹುದು. ಪ್ರವಾಸಿಗರಿಗೆ ಋತುಗಳ ನಿರ್ಬಂಧವಿಲ್ಲ. ಏಪ್ರಿಲ್– ಮೇ ತಿಂಗಳಲ್ಲಿ ಶುಭ್ರ ನೀಲಾಕಾಶದ ಕೆಳಗೆ ಹಚ್ಚಹಸುರಿನ ಪರ್ವತಶ್ರೇಣಿ.

ಅಕ್ಟೋಬರ್ ನಿಂದ ನವೆಂಬರ್‌ವರೆಗೆ ಶುಗರ್ ಮೇಪಲ್, ಹಿಕರಿ, ಸ್ಕಾರ್ಲೆಟ್ ಓಕ್, ಸ್ವೀಟ್ ಗಮ್ ಮರಗಳೆಲ್ಲ ಎಲೆ ಉದುರಿಸಲು ತಯಾರಿ ನಡೆಸುತ್ತಿದ್ದರೆ, ಪರ್ವತದ ಒಡಲಲ್ಲಿ ಕೇಸರಿ, ಕೆಂಪು, ಕಿತ್ತಳೆ, ಅರಶಿನ ಬಣ್ಣಗಳ ವರ್ಣಸ್ಫೋಟ.